# ಹೊಸ ವಿಳಾಸದ ಹೆಜ್ಜೆಗಳು: ಸಾಮಾಜಿಕ ತಲ್ಲಣಗಳು

ಶ್ರೀ ದೇಮಣ್ಣ ಸೊಗಲದ

ಸಹಾಯಕ ಪ್ರಾಧ್ಯಾಪಕರು, ಎಸ್.ಎಸ್. ಆರ್ಟ್ಸ್ ಕಾಲೇಜು & ಟಿ.ಪಿ. ಸೈನ್ಸ್ ಇನ್‌ಸ್ಟಿಟ್ಯೂಟ್, ಸಂಕೇಶ್ವರ.

DOI: https://doi.org/10.5281/zenodo.17257774

## ABSTRACT:

ಸಾಮಾಜಿಕ ತಲ್ಲಣಗಳನ್ನು ಪ್ರತಿಬಿಂಬಿಸುವ ಕಾವ್ಯ ಕನ್ನಡ ಸಾಹಿತ್ಯದಲ್ಲಿ ಹೊಸ ಹಾದಿಯನ್ನು ತೆರೆಯುತ್ತಿದೆ. ಡಾ. ಸಂತೋಷ ನಾಯಕ್ ಅವರ "ಹೊಸ ವಿಳಾಸದ ಹೆಜ್ಜೆಗಳು" ಕವನ ಸಂಕಲನವು ಸಾಮಾಜಿಕ ಜವಾಬ್ದಾರಿ, ಮಾನವೀಯ ಮೌಲ್ಯಗಳು, ಶಾಂತಿ, ಸಹಜೀವನ, ಸ್ತ್ರೀಪರ ಸಂವೇದನೆ ಮತ್ತು ಧಾರ್ಮಿಕ ಶೋಷಣೆಯ ವಿರುದ್ಧದ ಆಕ್ರೋಶಗಳನ್ನು ಪ್ರತಿಬಿಂಬಿಸುತ್ತದೆ. ಈ ಸಂಕಲನದಲ್ಲಿ ಕವಿ ಮೌನ ಮುರಿಯುವ ಪ್ರಯತ್ನ ಮಾಡುತ್ತಾ ಸಾಮಾಜಿಕ ಬದಲಾವಣೆಯ ಅವಶ್ಯಕತೆಯನ್ನು ಕವಿತೆಗಳ ಮೂಲಕ ಅಭಿವ್ಯಕ್ತಿಸುತ್ತಾರೆ. ಪಾರಿವಾಳದ ಪ್ರತೀಕದ ಮೂಲಕ ಶಾಂತಿ ಮತ್ತು ಸಹಜೀವನದ ಸಂದೇಶವನ್ನು ಹರಡುವ ಈ ಕಾವ್ಯ, ಸಾಮಾಜಿಕವಾಗಿ ಶೋಷಿತ ಜನರ ನೋವು, ಸಂಕಟ, ಆಶಾಭಾವನೆಗಳನ್ನು ಶಕ್ತಿ ತುಂಬಿದ ಸ್ವರದಲ್ಲಿ ಹೊರಹಾಕುತ್ತದೆ. ಧರ್ಮ, ಸಂಪ್ರದಾಯ, ಪಿತೃತ್ವದ ಹೆಸರಿನಲ್ಲಿ ನಡೆಯುವ ಶೋಷಣೆಗೆ ವಿರೋಧ ವ್ಯಕ್ತಪಡಿಸುವ ಮೂಲಕ ಮಾನವೀಯ ಮೌಲ್ಯಗಳನ್ನು ಬಿತ್ತುವ ಕೃತಿಯಾಗಿ ಇದು ಗುರುತಿಸಿಕೊಳ್ಳುತ್ತದೆ.

## KEYWORDS:

ಸಾಮಾಜಿಕ ತಲ್ಲಣಗಳು, ಶಾಂತಿ ಸಂದೇಶ, ಸ್ತ್ರೀಪರ ಸಂವೇದನೆ, ಧಾರ್ಮಿಕ ಶೋಷಣೆ, ಮಾನವೀಯ ಮೌಲ್ಯಗಳು, ಸಹಜೀವನ.

ಜಾಗತೀಕರಣದ ಸಂದರ್ಭದಲ್ಲಿ ಸಾಮಾಜಿಕ ಜವಾಬ್ದಾರಿ ಇಟ್ಟುಕೊಂಡು ಬದುಕುವ ಸನ್ನಿವೇಶದಲ್ಲಿ ಎದುರುಗೊಳ್ಳುತ್ತಿರುವ ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಹೊಸ ಬರಹಗಾರನ ತಲ್ಲಣಗಳು ತುಂಬಾ ವಿಶೇಷವಾಗಿವೆ. ಭಾರತೀಯ ಅದರಲ್ಲೂ ಕನ್ನಡ ಸಾಹಿತ್ಯ ಪರಂಪರೆಯನ್ನು ಗಮನಿಸಿದಾಗ ಸಾಮಾಜಿಕ ಸ್ಥಿತ್ಯಂತರಗಳ ಪಾತ್ರ ಮಹತ್ವದ್ದಾಗಿದೆ. ಇಂತಹ ಸಂದರ್ಭದಲ್ಲಿ ಸಾಕಷ್ಟು ರಾಜಕೀಯ ಸಾಮಾಜಿಕ ತಲ್ಲಣಗಳು ನಡೆಯುತ್ತಿದ್ದು, ಇವುಗಳ ಮೇಲೆ ಬೆಳಕು ಚೆಲ್ಲುವ ಬರಹಗಾರನ ಅಗತ್ಯ ಎಂದಿಗಿಂತ ಇಂದೂ ತುಂಬಾ ಅಗತ್ಯವಿದೆ. ಕಾವ್ಯ ಕಲ್ಪನೆಯಿಂದ ಹೊರಗೆ ಬಂದು ಸಾಮಾಜಿಕ ಸ್ಥಿರಗತಿಯನ್ನು ವಿವೇಚನೆಗೆ ಒಳಪಡಿಸಬೇಕು. ಹೀಗೆ ಸಾಮಾಜಿಕ ಜವಾಬ್ದಾರಿಯ ಮೇಲೆ ಬೆಳಕು ಚೆಲ್ಲುವ ಅನೇಕ ಕೃತಿಗಳು ಹೊಸದಾಗಿ

ಬರುತ್ತಿವೆ. ಇವುಗಳ ಸಾಲಿನಲ್ಲಿ ಕವಿ ಸಂತೋಷ ನಾಯಕ್ ಅವರ "ಹೊಸ ವಿಳಾಸದ ಹೆಜ್ಜೆಗಳು" ಕವನ ಸಂಕಲನ ಪ್ರಮುಖವಾಗಿದೆ. ಸಂಕಲನದ ಮುನ್ನುಡಿ ಬರೆದಿರುವ ಕವಯತ್ರಿ ಡಾ.ಎಚ್.ಎಲ್.ಪುಷ್ಪ ಅವರು "ಕವಿ ಕವಿಗಡಣದ ಸಂಖ್ಯೆ ಎಂದಿಗಿಂತಲೂ ವೇಗವಾಗಿ ಹೆಚ್ಚುತ್ತಿದೆ.ಅದರ ಜೊತೆ ಜೊತೆಗೆ ಹೊಸ ಲವಲವಿಕೆಯ ಕವಿತೆಗಳು ದೇಶ, ಭಾಷೆ, ಗಡಿರೇಖೆಗಳನ್ನು ದಾಟಿ ಕನ್ನಡಕ್ಕೆ ಕಾಲಿಡುತ್ತಿವೆ." (ಹೊ.ವಿ.ಹೆ. ಪುಟಸಂಖ್ಯೆ.13) ಎಂದಿರುವ ಅವರ ಮಾತು ಕನ್ನಡ ಸಾಹಿತ್ಯದ ಸಮೃದ್ಧಿಯ ಸಂಕೇತವಾಗಿದೆ. ಆದರೆ ಸಾಮಾಜಿಕ ತಲ್ಲಣಗಳನ್ನು ಅನ್ಯೋನ್ಯ ಸ್ನೇಹ ಮತ್ತು ಸಾಮಾಜಿಕ ಐಕ್ಯತೆಗೆ ಹಾನಿ ಉಂಟುಮಾಡದೆ ಕವಿತೆಗಳಲ್ಲಿ ದಾಖಲಿಸುವ ಈ ಕೃತಿಯನ್ನು ವಿಶ್ಲೇಷಣೆ ಮಾಡುವುದು ನನ್ನ ಲೇಖನದ ಪ್ರಮುಖ ಆಶಯವಾಗಿದೆ.

2023ನೇ ಸಾಲಿನ ಗವಿಸಿದ್ದ ಎನ್.ಬಳ್ಳಾರಿ ರಾಜ್ಯಮಟ್ಟದ ಕಾವ್ಯ ಪ್ರಶಸ್ತಿ ಪುರಸ್ಕೃತ ಕೃತಿ 'ಹೊಸ ವಿಳಾಸದ ಹೆಜ್ಜೆಗಳು' 104 ಪುಟಗಳ 43 ಕವಿತೆಗಳ ಒಳಗೊಂಡಿರುವ ಕೃತಿ ನಾಡಿನ ಹಿರಿಯ ಲೇಖಕರಿಂದ ಪ್ರಶಂಸೆಗೆ ಒಳಗಾದ ಮತ್ತು ಕನ್ನಡ ಸಾರಸ್ವತ ಲೋಕದ ಚರಿತ್ರೆಯಲ್ಲಿ ದಾಖಲೆಗೊಳ್ಳಬಹುದಾದ ಕೃತಿ. ಇಡೀ ಕವಿತೆಗಳ ಆಶಯ ಆರಂಭದ ಕವಿತೆಯ ಎರಡು ಸಾಲುಗಳಲ್ಲಿ ಅಭಿವ್ಯಕ್ತಿಸುವ ಕವಿ 'ಮೌನ ಮುರಿಯುವ ಹುಡುಕಾಟದಲ್ಲಿದ್ದೇನೆ' ಎಂದು ಸಮಾಜದಲ್ಲಿರುವ ತಲ್ಲಣಗಳಿಗೆ ತಣ್ಣನೆಯ ಪ್ರತಿರೋಧ ನೀಡಲು ಸಿದ್ಧತೆಯ ಹಾದಿಯನ್ನು ತೆರೆದಿಡುತ್ತಾರೆ. ಕವಿಯ ಕುರಿತು ಬರೆಯುತ್ತಾ ನಾಡಿನ ಹಿರಿಯ ಸಾಹಿತಿ ಸರಜೂ ಕಾಟ್ಕರ ಅವರು "ಈ ಹುಡುಗ ತನ್ನ ಕುಟುಂಬದಲ್ಲಿ ಮೊದಲ ತಲೆಮಾರಿನ ಅಕ್ಷರವಂತ, ಬೆನ್ನ ಹಿಂದೆ ಬೇಕಾದಷ್ಟು ಅವಮಾನ ಶೋಷಣೆಗಳ ಗುಡ್ಡವನ್ನು ಹೊತ್ತುಕೊಂಡಿದ್ದರೂ ಮನಸಿನಲ್ಲಿ ನಂಜು, ವಿಷ, ಸೇಡು–ಈ ತರಹದ ವೈರಸ್‌ಗಳನ್ನು ಇಟ್ಟುಕೊಂಡವನಲ್ಲ." (ಹೊ.ವಿ.ಹೆ.ಪುಟಸಂಖ್ಯೆ–08) ಎಂದು ಉದ್ಗರಿಸುವ ಅವರ ಮಾತು ಕವಿತೆಗಳ ಒಳಗೂ ಹೊರಗೂ ದೇದೀಪ್ಯಮಾನವಾಗಿ ಪ್ರಜ್ವಲಿಸುತ್ತದೆ. ಪರಸ್ಪರ ಸ್ನೇಹ, ಪ್ರೀತಿ, ಕರುಣೆ, ಸಹನಶೀಲತೆಯ ಗುಣಗಳಿಂದ ಬದುಕನ್ನು ಸುಂದರವಾಗಿಸಬಹುದು ಎಂದು ನಂಬಿರುವ ಕವಿ

**"ಕವಿದ ಕತ್ತಲೆ ಕೆಳಗೆ**
**ಬೆಳದಿಂಗಳ ಬೆಳಕಿದೆ**
**ಆಸೆಗಳ ರೆಕ್ಕೆ ಬಲಿತು**
**ಬಾನಂಗಳದಲಿ ಹಾರಾಡಲು**
**ನದಿ ಸಾಗರ ಕಣಿವೆ ದಾಟಿ**
**ಕೂಡಿ ಬದುಕುವ ಕಲೆ ಕಲಿಯಲು**
**ನಾವಾಗಬೇಕು ಪಾರಿವಾಳಗಳು."**

**(ಹೊ.ವಿ.ಹೆ.ಪುಟಸಂಖ್ಯೆ–22–28)**

ಎಂದು ಜೀವನದ ದಾರಿಗುಂಟ ಎದುರುಗೊಳ್ಳುವ ಸವಾಲುಗಳಿಗೆ ಸಹೃದಯತೆಯಿಂದ ಸಾವಧಾನದಿಂದ ಸಾಮರಸ್ಯದಿಂದ ಉತ್ತರಿಸಲು ಕ್ರಿಯಾಶೀಲರಾದರೆ ಯಾವುದೇ ಒಂದು ದಿನ, ಒಂದು ಕ್ಷಣ ಬೆಳಕು ಮೂಡಲೇಬೇಕೆಂದು ಬುದ್ಧ ಚಿಂತನೆಯ ವಿವೇಕದ ನಿಧಿಯೊಂದನ್ನು ತೆರೆದಿಡುತ್ತಾ ಕಾವ್ಯ ಉದಾರವಾದ ಮಾನವತಾವಾದದ ನೆಲೆಯಲ್ಲಿ ರೂಪಿತವಾದದ್ದು, ಅದು ಸಾಮಾಜಿಕ ಆಕ್ರೋಶದ ಧ್ವನಿಯಾಗಿರದೆ ಜೀವನದ ಅಗಾಧತೆಯ ಶೋಧದಲ್ಲಿ ಕ್ರಿಯಾಶೀಲವಾಗಿರುವಂತದ್ದು ಎಂಬ ಅರಿವನ್ನು ಮೂಡಿಸುತ್ತದೆ. ಪಾರಿವಾಳದ ಪ್ರತಿಮೆಯ ಮೂಲಕ ಜಗತ್ತಿಗೆ ಬುದ್ಧಗುರುವಿನ ಕಾರುಣ್ಯ ಹೊತ್ತ ಶಾಂತಿ ಮಂತ್ರದ ಕಹಳೆ ಮೊಳಗಿಸಬೇಕು.

“ಈ ಫಲವತ್ತಾದ ಭೂಮಿಯಲಿ
ಏನಾದರೂ ಬಿತ್ತುವುದಾದರೆ
ಶಾಂತಿಯ ಬೀಜವನ್ನು ಬಿತ್ತು
ಈ ಜಗತ್ತು ನಿಂತಿರುವುದೆ ಶಾಂತಿಯ ನೆರಳಿನಲ್ಲಿ” (ಪುಟ.61)

ಮಾನವ ಜಗತ್ತಿನ ಸಂವೇದನಾಶೀಲ ಪ್ರತಿನಿಧಿಯಾದ ಕವಿ, ತನ್ನ ಬದುಕಿನ ಏಳುಬೀಳುಗಳ ನಡುವೆ ಕಾಲದ ಪಾತ್ರವನ್ನು ಕುರಿತು ಜಿಜ್ಞಾಸೆ ನಡೆಸುವ ಹಾಗೆ ಸಾಮಾಜಿಕ ಪ್ರಜ್ಞೆಯ ಅರಿವಿನ ಅನ್ವೇಷಣೆಗೆ ತೊಡಗಿಕೊಂಡಿರುವುದು ಕೃತಿಯ ಅವಲೋಕನದಿಂದ ತಿಳಿದುಬರುತ್ತದೆ. “ನನ್ನ ನಿನ್ನ ನಡುವೆ ಏನಾದರೂ ಹಗೆ ಇದ್ದರೆ ಮರೆತುಬಿಡು. ನಮಗೆ ನಗೆ ತೋಟವೇ ಬೇಕಾಗಿದೆ.” ನಾವು ಸಮಾಜದ ಒಳಗೆ ಅಂತಃಕರಣದ ಭಾವಕೋಶ ಪ್ರವೇಶ ಮಾಡಬೇಕಾಗಿದೆ ಎಂದು ನುಡಿಯುತ್ತಾರೆ.

ಶ್ರೀ ಸಾಮಾನ್ಯ ಮತ್ತು ಸ್ತ್ರೀ ತನ್ನ ಕಾವ್ಯಕ್ಕೆ ಆಯ್ಕೆಯ ವಸ್ತುಗಳು ಅವುಗಳಿಗಾಗಿ ಕವಿ ನೋಡುವ ಪರಿಯೇ ಅನೇಕ ಸತ್ಯಗಳನ್ನು ಮನಗಾಣಿಸುತ್ತದೆ ಶತಮಾನಗಳಿಂದ ನಡೆದು ಬಂದಿರುವ ಮತ್ತು ಸಹಜವೆಂದೇ ನಂಬಿರುವ ಅಂಶಗಳನ್ನ ಪ್ರಶ್ನಿಸುತ್ತಾ ಸ್ತ್ರೀ ಪರವಾದ ಚಿಂತನೆಗಳನ್ನು ಸಂಕಲನ ಉದ್ದಕ್ಕೂ ದಾಖಲಿಸಿರುವುದು ಕಂಡುಬರುತ್ತದೆ.

**“ಅದೆಷ್ಟೋ**
**ಹಗಲುಗಳೊಂದಿಗೆ**
**ರಾತ್ರಿಗಳನೂ ಕಳೆದಳು**
**ಜಡೆಹೆಣೆವ ಸಖಿಗೆ ಉತ್ತರಿಸದೆ**
**ಅರಮನೆ ಕಂಬದ ಗೊಂಬೆಯಾಗಿ**
**ನಿರ್ವಾತ ಕತ್ತಲೆ ಇರುಳಿನಂತೆ.”**

'ಯಶೋಧರಾ' ಕವಿತೆಯ ಮೂಲಕ ಹೆಣ್ಣು ಕೇವಲ ನಾಲ್ಕು ಗೋಡೆಯ ಮಧ್ಯೆ ಬದುಕಿನ ಅನೇಕ ನೈತಿಕಾತ್ಮಕ ಮುಖಗಳನ್ನು ಮರೆಮಾಚುತ್ತಾ ಸೌಂದರ್ಯ

ಸಮ್ಮೋಹನದ ಗೊಂಬೆಯ ರೂಪ ಪಡೆದ ಸ್ತ್ರೀ ಮನದ ತೊಳಲಾಟದ ಬಿಡುಗಡೆಯ ಹಾದಿಯನ್ನು ಎದುರು ನೋಡುತ್ತಿದೆ. ಸ್ವಂತ ಸಂಕಲ್ಪದ ಬಲವಿಲ್ಲದೆ ಏನನ್ನು ಸೃಷ್ಟಿಸಲಾಗದ ರೋಗಗ್ರಸ್ಥ ಮನಸ್ಥಿತಿಯ ಶಕ್ತಿಯೊಂದನ್ನು ಅನುಕರಿಸುತ್ತಿದೆ ಇಂತಹ ಒತ್ತಡಗಳಿಂದ ಹೊರ ಬರುವ ಅನಿವಾರ್ಯತೆಯನ್ನು ನಿರ್ವಚಿಸುತ್ತಿದೆ.

**‘‘ಕೊಲೆ ಸುಲಿಗೆ ಅತ್ಯಾಚಾರ**
**ನಡೆಯುತ್ತಲೇ ಇದೆ**
**ಯುದ್ಧದ ಹೆಸರಿನಲ್ಲಿ ನಿರಂತರ’’**

ಸಮಾಜದ ಜಡ್ಡುಗಟ್ಟಿದ ಆಲೋಚನಾ ಕ್ರಮವನ್ನು ವಿರೋಧಿಸುತ್ತಾ ಸಾಮಾಜಿಕವಾಗಿ ಕವಿಯ ಪಾತ್ರವೇನು? ಎಂಬುದನ್ನು ಸ್ಪಷ್ಟಪಡಿಸುವತ್ತ, ಪ್ರಖರವಾದ ಮಾನವೀಯ ಮೌಲ್ಯಗಳನ್ನು ಬಿತ್ತುವ ಅನಿವಾರ್ಯವಿದೆ ಸಾಮಾಜಿಕ ಚಲನಶೀಲ ಪ್ರಕ್ರಿಯೆಯಲ್ಲಿ ಬರೆಯ ಹೊರಟಾಗ. ಅವುಗಳನ್ನು ಸಮರ್ಥಿಸುವ ಅಗತ್ಯವು ಇರುತ್ತದೆ. ಅದನ್ನು ಕವಿ ಸಮರ್ಥವಾಗಿ ನಿಭಾಯಿಸಿದ್ದಾರೆ ಎಂದು ತಿಳಿಯುತ್ತದೆ. ‘‘ಮರುಭೂಮಿಯಲ್ಲಿಯೂ ಓಯಸಿಸ್‌ನ ಕುರುಹುಗಳಿವೆ ಎಂದು ನ್ಯಾಯದ ಬಾಗಿಲು ಮುಚ್ಚಿಲ್ಲ ಅದನ್ನು ಹುಡುಕುವ ಪ್ರಯತ್ನ ಇನ್ನು ನಿಂತಿಲ್ಲ ಎಂಬ ಆಶಾಭಾವನೆಯನ್ನು ಜೀವಂತವಾಗಿಸಿದ್ದಾರೆ.

ಶತ ಶತಮಾನಗಳಿಂದ ಹೆಣ್ಣು ನೋವು ಸಂಕಷ್ಟಗಳ ಜೊತೆಗೆ ಸ್ವಾತಂತ್ರ್ಯ ಹೀನಳಾಗಿ ಬದುಕುವುದಕ್ಕೆ ಪರೋಕ್ಷ ಮತ್ತು ಪ್ರತ್ಯಕ್ಷವಾಗಿ ಧರ್ಮದ ಬೆಂಬಲವಿದೆ. ಇದು ಸಹಜ ಎಂದೇನಿಸುವಂತೆ ಪ್ರತಿಯೊಂದು ಧರ್ಮ ತನ್ಮೂಲಕ ಪರಸ್ಪರ ಭಿನ್ನ ಎನ್ನಬಹುದಾದ ಸಂಪ್ರದಾಯಗಳ ಆಚರಣೆಗಳ ಮೂಲಕ ಅವಿಚ್ಛಿನ್ನ ಆಶೋತ್ತರದ ಪ್ರಜ್ಞೆಯಲ್ಲಿ ಹೆಣ್ಣನ್ನು ಕಟ್ಟಿಹಾಕಿವೆ. ಎಂಬುದನ್ನು 'ಅವಳ ಸ್ವಾತಂತ್ರ್ಯ' ಕವಿತೆಯಲ್ಲಿ ‘‘ದೇವಸ್ಥಾನದ ಘಂಟೆಗಳ ನಾದ ಕೂಡ ಅವಳನೆಂದೂ ಒಡತಿ ಮಾಡಲಾರದು. ಚರ್ಚ್‌ನ ಆಮೆನ್‌ಗಳ ಪ್ರೇಝ್ ಲಾರ್ಡ್ ಆಕೆಯನೆಂದೂ ಪೋಪ್ ಮಾಡಲಾರದು. ನಮಾಝ್ ಆಯಾತ್ ಕಲೀಮಾ ರೋಜಾ ಅವಳನೆಂದೂ ಜನ್ನತ್‌ಗೆ ಸೇರಿಸಲಾರದು’’ ಎಂದು ಹೇಳುತ್ತಾ ಕವಿ ಸಾತ್ವಿಕ ಆಕ್ರೋಶದೊಂದಿಗೆ ಧರ್ಮಾಚರಣೆಗಳ ಮೂಲಕ ಸ್ತ್ರೀ ಶೋಷಣೆಯನ್ನು ವಿರೋಧಿಸುತ್ತಾರೆ. ಈ ತೆರನಾದ ಅನೇಕ ಪ್ರತೀಮೆಗಳ ಮೂಲಕ ಸ್ತ್ರೀ ಪರ ಸಂವೇದನೆಯಿಂದ ಸಾಮಾಜಿಕ ಮೌಲ್ಯಗಳನ್ನು ಮಾನ್ಯೀಕರಿಸಿದ್ದಾರೆ.

### ಪರಾಮರ್ಶನ ಗ್ರಂಥಗಳು:


1. ಸಂತೋಷ ನಾಯಕ್, (2022), ಹೊಸ ವಿಳಾಸದ ಹೆಜ್ಜೆಗಳು, ಯಾಜಿ ಪ್ರಕಾಶನ, ಬಾಗಲಕೋಟೆ.
2. ಪುಷ್ಪ ಎಚ್.ಎಲ್., (2023), ಸಾಮರಸ್ಯ ಧ್ಯಾನಿಸುವ ಸಾಲುಗಳು, ಉದಯಕಾಲ ಪತ್ರಿಕೆ ಲೇಖನ.
3. ನಾಗೇಶ ಜೆ. ನಾಯಕ್, (2023), ಹಗೆ ಮರೆತರೆ ನಗೆ ತೋಟ ನಲಿವುದು ವಿಮರ್ಶಕರು, ಉದಯಕಾಲ ಪತ್ರಿಕೆ ಲೇಖನ.
4. ನಾಗರೇಖಾ ಗಾಂವಕರ, (2023), ಹೊಸ ವಿಳಾಸದ ಹೆಜ್ಜೆಗಳು, ವಿಶ್ವಧ್ವನಿ ಆನ್‌ಲೈನ್ ಪತ್ರಿಕೆ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.